ಅ) *ಈ ಕೈಗಾರಿಕೆಗಳ ಪೈಕಿ ಎನ್.ಜಿ.ಇ.ಎಫ್. ವಿಕ್ರಾಂತ್ ಟಯರ್ಸ್ ನಿ, ಕರ್ನಾಟಕ ಟೆಲಿಕಾಂ ನಿ., ಮತ್ತು ಮೈಸೂರು ಸೋಪ್ಸ್ ಮತ್ತು ಡಿಟರ್‌ಜೆಂಟ್ಸ್ ಈ ಸಂಸ್ಥೆಗಳನ್ನು ಕರ್ನಾಟಕ ಸರ್ಕಾರ ಮಾರಾಟ ಮಾಡಲು ಉದ್ದೇಶಿಸಿದೆಯೇ?*

ಇ) *ಇನ್ನು ಯಾವ ಯಾವ ಕೈಗಾರಿಕೆಗಳನ್ನು ಮಾರಾಟ ಮಾಡಲು ಉದ್ದೇಶಿಸಲಾಗಿದೆ?*

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು :

ಅ) 76.

ಆ) ಸರ್ಕಾರವು ಕರ್ನಾಟಕ ಟೆಲಿಕಾಂ ನಿಯಮಿತದಲ್ಲಿ ಷೇರು ಬಂಡವಾಳವನ್ನು ಹಿಂತೆಗೆದುಕೊಳ್ಳಲು ಎನ್.ಜಿ.ಇ.ಎಫ್. ಗೆ ಒಪ್ಪಿಗೆ ನೀಡಿದೆ. ವಿಕ್ರಾಂತ್ ಟಯರ್ಸ ಲಿಮಿಟೆಡ್‌ಗೆ ಸೂಕ್ತ ತಾಂತ್ರಿಕ ಪಾಲುದಾರರನ್ನು ತರಲು ಕೆಎಸ್‌ಐಐಡಿಸಿ ಗೆ ಒಪ್ಪಿಸಿದೆ ಹಾಗೂ ಅವಶ್ಯಕತೆ ಬಿದ್ದರೆ ಸೂಕ್ತ ಬಂಡವಾಳ ತೊಡಗಿಸದೇ ಇರಲು ನಿರ್ದರಿಸಿದೆ. ಎನ್‌ಜಿ.ಇಎಫ್. ಮತ್ತು ಕೆಎಸ್‌ಡಿಎಲ್ ಕಾರ್ಖಾನೆಗಳ ವಿಷಯ ಬಿ.ಐ.ಎಫ್.ಆರ್. ಮುಂದಿವೆ ಅವರು ಸೂಕ್ತ ಪುನರಸಜ್ಜೀಕರಣದ ಪ್ರಸ್ತಾವನೆಯ ಬಗ್ಗೆ ಪರಿಗಣಿಸುವರು.

ಇ) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ ಮೇಲೆ ತಿಳಿಸಿದುದನ್ನು ಹೊರತು ಪಡಿಸಿ, ಚಾಮುಂಡಿ ಮೆಷಿನ್ ಟೂಲ್ಸ ಲಿ.ನಲ್ಲಿ ಬಂಡವಾಳ ತೊಡಗಿಸದಿರಲು ಸರ್ಕಾರವು ನಿರ್ಧರಿಸಿದೆ.

ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ವಿಶೇಷ ಘಟಕ ಯೋಜನೆಗೆ ಖರ್ಚಾದ ಹಣ.

536- ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಸರ್ಕಾರ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ವಿಶೇಷ ಘಟಕ ಯೋಜನೆಯಲ್ಲಿ ಕಳೆದ 3 ವರ್ಷಗಳಿಂದ ಖರ್ಚು ಮಾಡಬೇಕಾದ ಹಣವೆಷ್ಟು, ಖರ್ಚು ಮಾಡಿದ ಹಣವೆಷ್ಟು, ಕೇಂದ್ರ ಸರ್ಕಾರದಿಂದ ಬಂದ ಹಣ ಮತ್ತು ರಾಜ್ಯದ ಪಾಲು ಇವುಗಳನ್ನು ಪ್ರತ್ಯೇಕವಾಗಿ ನೀಡುವುದು?*

ಆ) *ಕರ್ನಾಟಕ ಸರ್ಕಾರ ಕಳೆದ ಹಲವಾರು ವರ್ಷಗಳಿಂದ ತನ್ನ ಪಾಲಿನ ಪೂರ್ಣ ಹಣ ಖರ್ಚು ಮಾಡುತ್ತಿಲ್ಲವೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಖರ್ಚು ಮಾಡಲು ಕೈಗೊಳ್ಳಲಾಗಿರುವ ಕ್ರಮಗಳೇನು?*

ಇ) *ಖರ್ಚು ಮಾಡಲು ವಿಫಲರಾದ ಇಲಾಖೆ ಅಧಿಕಾರಿಗಳ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಕಳೆದ ಮೂರು ವರ್ಷಗಳಿಂದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗೆ ನಿಗದಿಪಡಿಸಿದ ಹಣ ಖರ್ಚಾದ ಹಣ ಕೇಂದ್ರ ಸರ್ಕಾರದಿಂದ ಮಂಜೂರಾದ ವಿಶೇಷ ಕೇಂದ್ರೀಯ ಸಹಾಯಧನ ಇದರ ಬಗ್ಗೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಕಳೆದ ಹಲವಾರು ವರ್ಷಗಳಿಂದ ವಿಶೇಷ ಘಟಕ ಯೋಜನೆ ಗಿರಿಜನ ಉಪಯೋಜನೆಯ ಕಾರ್ಯಕ್ರಮಗಳಿಗಾಗಿ ರಾಜ್ಯ ಯೋಜನೆಗಳಡಿಯಲ್ಲಿ ಒದಗಿಸಲಾಗುತ್ತಿರುವ ಹಣವನ್ನು ಪೂರ್ಣವಾಗಿ ಖರ್ಚು ಮಾಡಲಾಗುತ್ತಿಲ್ಲವೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆದ್ದರಿಂದ 1990-91ನೇ ಸಾಲಿನಿಂದ ವಿಶೇಷ ಘಟಕ ಯೋಜನೆ ಹಾಗೂ 94-95ನೇ ಸಾಲಿನಿಂದ ಗಿರಿಜನ ಉಪಯೋಜನೆಯಡಿಯಲ್ಲಿ ಕೆಲವೊಂದು ಇಲಾಖೆಗಳಿಗೆ ನಿಗದಿಪಡಿಸಿದ ಹಣವನ್ನು ಹಿಂದಕ್ಕೆ ಪಡೆದು ಕ್ರೋಢೀಕರಿಸಿ ಅತ್ಯವಶ್ಯಕವಾದ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗುತ್ತಿದೆ.

ಇದಲ್ಲ, ಕೆಲವೊಂದು ಕಾರ್ಯಕ್ರಮಗಳಿಗೆ ಸರ್ಕಾರದಿಂದ ಮಾರ್ಚ ಮಾಹೆಯ ಅಂತ್ಯದಲ್ಲಿ ಹಣವನ್ನು ಬಿಡುಗಡೆ ಮಾಡುತ್ತಿರುವುದರಿಂದ ಸದರಿ ಆರ್ಥಿಕ ವರ್ಷದಲ್ಲಿ ಹಣವನ್ನು ಸಂಪೂರ್ಣವಾಗಿ ವಿನಿಯೋಗಿಸಲು ಅವಕಾಶವಿರುವುದಿಲ್ಲ. ಈ ಅಂಶವನ್ನು ಮನಗಂಡು ಕಳೆದ ಎರಡು ವರ್ಷಗಳಿಂದ ಮಾರ್ಚ ಅಂತ್ಯಕ್ಕೆ ಉಳಿದ ಹಣವನ್ನು ವಿನಿಯೋಗಿಸಲು ಜೂನ್ ಅಂತ್ಯದವರೆಗೆ ಕಾಲಾವಕಾಶವನ್ನು ವಿಸ್ತರಿಸಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ನಿಗದಿಪಡಿಸಿರುವ ಹಣವು ಪರಿಣಾಮಕಾರಿಯಾದ ರೀತಿಯಲ್ಲಿ ವಿನಿಯೋಗವಾಗುವಂತೆ ನೋಡಿಕೊಳ್ಳುವ ಉದ್ದೇಶದಿಂದ 1996-97ನೇ ಸಾಲಿನಿಂದ ಉನ್ನತ ಮಟ್ಟದ ಸಮಿತಿಯೊಂದನ್ನು (ಸ್ಟಿಯರಿಂಗ್ ಕಮಿಟಿ) ರಚಿಸಲು ಉದ್ದೇಶಿಸಲಾಗಿದ್ದು, ಆದರ ಮುಖ್ಯ ಕಾರ್ಯದರ್ಶಿಯವರು ಇದರ ಅಧ್ಯಕ್ಷರಾಗಿರುತ್ತಾರೆ. ಹಾಗೂ ವಿವಿಧ ಅಭಿವೃದ್ಧಿ ಇಲಾಖೆಗಳ ಮುಖ್ಯಸ್ಥರು ಸದಸ್ಯರಾಗಿರುತ್ತಾರೆ. ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ರೂಪಿಸಿರುವ ಕಾರ್ಯಕ್ರಮಗಳ ಪ್ರಯೋಜನದ ಬಗ್ಗೆ ವಿಮರ್ಶಿಸಿ ನಂತರ ಹಣ ಬಿಡುಗಡೆ ಮಾಡಲು ಈ ಸಮಿತಿಯ ಮುಖಾಂತರ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಈ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ನಿಗದಿಪಡಿಸಲಾಗಿರುವ ಹಣವನ್ನು ಪರಿಣಾಮಕಾರಿಯಾಗಿ ನಿಗದಿತ ಅವಧಿಯೊಳಗಾಗಿ ವಿನಿಯೋಗಿಸುವಂತೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಖರ್ಚು ಮಾಡದೇ ಇರುವುದು ಕಂಡುಬಂದಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು.

ಅನುಬಂಧ

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ 1992-93, 93-94, 94-95 ರವರೆಗೆ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಹಣ ಮತ್ತು ಖರ್ಚಾದ ಹಣ ಹಾಗೂ ಕೇಂದ್ರ ಸರ್ಕಾರಗಳಿಂದ ಬಿಡುಗಡೆಯಾದ ಹಣ ಮತ್ತು ಖರ್ಚಾದ ಹಣದ ವಿವರ.

ವರ್ಷ	ರಾಜ್ಯ ಯೋಜನೆ		ವಿಶೇಷ ಕೇಂದ್ರೀಯ ಸಹಾಯ	
	ಅನುದಾನ	ಖರ್ಚು	ಅನುದಾನ	ಖರ್ಚು
ವಿಶೇಷ ಘಟಕ ಯೋಜನೆ				
1992-93	17602.07	16049.17	1310.00	1310.00
1993-94	28069.49	25893.95	1282.71	1282.71
1994-95	30353.03	28921.91	1873.76	1873.76
ಗಿರಿಜನ ಉಪಯೋಜನೆ				
1992-93	2046.85	1349.21	327.42	327.42
1993-94	3729.96	3197.32	439.76	439.76
1994-95	4639.69	4576.21	409.03	409.03

ರಾಜ್ಯದಲ್ಲಿರುವ ನೂಲಿನ ಗಿರಣಿಗಳ ಸಂಖ್ಯೆ

537 - ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಕ್ಕರೆ,ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿಶಾಸ್ತ್ರ, ಮತ್ತು ಪರಿಸರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ನೂಲಿನ ಗಿರಣಿಗಳೆಷ್ಟು? (ಪ್ರತಿ ಗಿರಿಣಿಯ ವಿವರ ನೀಡುವುದು) ಇವುಗಳ ಉತ್ಪಾದನಾ ಸಾಮರ್ಥ್ಯವೆಷ್ಟು? ಇವುಗಳಲ್ಲಿ ಲಾಭದಲ್ಲಿರುವ ಸಂಸ್ಥೆಗಳೆಷ್ಟು? ಅವುಗಳು ಯಾವುವು?

ಆ) ನಷ್ಟ ಅನುಬವಿಸುತ್ತಿರುವ ಗಿರಣಿಗಳೆಷ್ಟು? ಅವುಗಳು ಯಾವುವು? ಮತ್ತು ಮುಚ್ಚಿರುವ ಗಿರಣಿಗಳೆಷ್ಟು?

ಇ) ನಷ್ಟದಲ್ಲಿರುವ ಮತ್ತು ಮುಚ್ಚಿರುವ ಸಂಸ್ಥೆಗಳ ಪುನಶ್ಚೇತನಕ್ಕೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು 50 ನೂಲಿನ ಗಿರಣಿಗಳಿವೆ. ಪ್ರತಿ ಗಿರಣಿಯ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. ಇವುಗಳ ಉತ್ಪಾದನಾ ಸಾಮರ್ಥ್ಯ 10.90 ಲಕ್ಷ ಕದಿರುಗಳು.ಇವುಗಳಲ್ಲಿ ಕೆಳಕಂಡ ಎರಡು ಸಹಕಾರಿ ನೂಲಿನ ಗಿರಣಿಗಳು ಲಾಭದಲ್ಲಿರುತ್ತವೆ.

1) ಬನಹಟ್ಟಿ ಸಹಕಾರಿ ನೂಲಿನ ಗಿರಣಿ, ನಿ, ಬನಹಟ್ಟಿ, ಬಿಜಾಪುರ ಜಿಲ್ಲೆ.

2) ಗದಗ್ ಸಹಕಾರಿ ನೂಲಿನ ಗಿರಣಿ ನಿ, ಹುಲಕೋಟಿ, ಧಾರವಾಡ ಜಿಲ್ಲೆ.

(ಖಾಸಗಿ ಗಿರಣಿಗಳ ಮಾಹಿತಿ ಲಭ್ಯವಿರುವುದಿಲ್ಲ).